# ಫುಸ್ಕೋಸ್ ಶಾಲೆ

ಇಂದಿರಾನಗರ ಬೆಂಗಳೂರು

ಅರ್ಧವಾರ್ಷಿಕ ಪರೀಕ್ಷೆ – 2016-17

ವಿಷಯ; ಕನ್ನಡ

ತರಗತಿ:VII ಅಂಕಗಳು:80

ವಿಭಾಗ ಎ

**I. ಅರ್ಥಬರೆಯಿರಿ:–** 4

೧. ದೈನಂದಿನ = ೨.ದಯಮಾಡಿಸಿದ = ೩.ಐಸ್‌ಪ್ಯೆಸ್ = ೪. ಅಂಗರಕ್ಷಕ =

೫.ಕ್ರೀಡಾಂಗಣ = ೬.ಶುಭಶಕುನ= ೭.ನವಪಲ್ಲವ= ೮. ಅಂತರ =

**II.ಬಿಟ್ಟಿರುವ ಸ್ಥಳಗಳನ್ನು ಪೂರ್ತಿಗೊಳಿಸಿರಿ:–** 2½

೧.ಅಶ್ವದಳಕ್ಕೆ ಸಂಬಂಧಿಸಿದ ಪ್ರಧಾನ ಕಾರ್ಯಾಲಯವು _____ ನಲ್ಲಿದೆ

೨.ಸ್ಪರ್ಧೆಗಳು ಪ್ರಥಮ ಸ್ಥಾನ ಪಡೆದವರಿಗೆ ___ ಪದಕವನ್ನು ನೀಡುತ್ತಾರೆ.

೩.ಒಬ್ಬ ರಾಜನು ಕುದುರೆಯನ್ನೇರಿ _____ ಹೊರಟ್ಟಿದ್ದನು.

೪. ಬೇಟೆಗಾರನು ನಾಲ್ಕು ದಿನ ಕಳೆದ ಮೇಲೆ ನಾನು ___ ಗೆ ಬರುತ್ತೇನೆ ಎಂದನು.

೫.ಅಶ್ವದಳ ಎಂದರೆ _______ ದಳ

**III. ಪದ್ಯವನ್ನು ಪೂರ್ತಿಗೊಳಿಸಿರಿ:–** 6

೧. ಅಕ್ಷರ ಕಲಿಯಿರಿ

____________________

_____________________

__________ ಆ ಆನೆ ॥

೨. ನವ ಯುಗಾದಿ__________

_____________________

_____________________

___________ತನವನು ಚೆಲ್ಲಿತು.

**IV.ಹೊಂದಿಸಿ ಬರೆಯಿರಿ:-** **2½**

| | |
|---|---|
| ೧.ಅಕ್ಬರ್ | ಸಮವಸ್ತ್ರಗಳು |
| ೨.ಮೂರು ಬಗೆಯ | ಮೊಳಗಿದವು |
| ೩.ಒಲಂಪಿಯಾ | ದೊಡ್ಡಹಬ್ಬ |
| ೪.ವಾದ್ಯಗಳು | ಒಂದು ನಗರ |
| ೫.ದೀರ್ಘಾವಧಿಯ | ಚಕ್ರವರ್ತಿ |

**V.ಸ್ವಂತ ವಾಕ್ಯದಲಿ ್ಲಬರೆಯಿರಿ:-** **7**

೧. ಮಾರಾಟ - ೨.ಅರಮನೆ- ೩.ತರಬೇತಿ- ೪.ಬೇಟೆಗಾರ-
೫. ಬಹುಮಾನ ೬.ಗಣ್ಯವ್ಯಕ್ತಿ- ೭.ಸಜ್ಜನರು-

**VI.ವಿರುದ್ಧಾರ್ಥಕ ಪದ ಬರೆಯಿರಿ:-** **4**

೧.ಆದಿ ೨.ಜೋರಾಗಿ ೩.ಬಹಳ ೪.ಸಾಧ್ಯ ೫.ಭಯ
೬.ಕತ್ತಲು ೭.ಸ್ಪಷ್ಟ ೮.ಆಧಾರ

**VII.ವಚನ ಬದಲಾಯಿಸಿರಿ.** **4**

೧.ಪಂಡಿತ- ೨.ಮಾತುಗಳು- ೩.ಅರಮನೆ- ೪.ಹಕ್ಕಿ- ೫.ಮನುಷ್ಯ-
೬.ಮಗು- ೭.ಅವನು- ೮.ನೀವು-

**VIII.ಬಿಡಿಸಿ ಬರೆಯಿರಿ.** **2½**

೧.ಪುಸ್ತಕವನ್ನು = ೨.ಶಾಲೆಯಿಂದ = ೩.ಮನೆಯಲ್ಲಿ =
೪.ಮೈಸೂರಿಗೆ = ೫.ಪಾಠವನ್ನು =

**IX.ಗುಂಪಿಗೆ ಸೇರದ ಪದ ಬರೆಯಿರಿ.** **2½**

೧.ಮನುಜರು, ಮನುಷ್ಯರು, ಮಾನವರು, ದಾನವರು
೨.ಸಂತೋಷ, ವರ್ಷ, ಆನಂದ, ಹರ್ಷ
೩. ಗಿಡ, ಮರ, ಕೊಂಬೆ, ಸಿಂಬೆ
೪.ಹಕ್ಕಿ, ಪಕ್ಷಿ, ಖಗ, ಮಗ
೫. ಜೀವನ, ಹೋಳು, ಬದುಕು, ಬಾಳು

## X. ಪ್ಯಾಸೇಜ್

ಒಂದು ಊರಿನಲ್ಲಿ ಓರ್ವ ಬ್ರಾಹ್ಮಣನಿದ್ದನು. ಅವನು ಸಕಲಶಾಸ್ತ್ರ ಪುರಾಣಗಳನ್ನು ಓದಿ ಪಂಡಿತನಾಗಿದ್ದನು. ಆದ್ದರಿಂದ ಅವನಿಗೆ ತಾನು ಎಲ್ಲವನ್ನು ತಿಳಿದಿರಿವ ಸರ್ವಜ್ಞ ಎಂಬ ಅಹಂಭಾವವಿತ್ತು. ಅವನು ಇನ್ನು ತಾನು ಕಲಿಯುವುದು ಏನೂ ಇಲ್ಲವೆಂದು ಭಾವಿಸಿದ್ದನು.

ಮನುಷ್ಯನು ಎಷ್ಟು ಕಲಿತರೂ ಕಲಿಯುವುದು ಇದ್ದೇ ಇರುತ್ತದೆ. ಆದುದರಿಂದ ಯಾವ ಮನುಷ್ಯನು ಪರಿಪೂರ್ಣ ಜ್ಞಾನಿಯಲ್ಲ. ಆದರೆ ಆ ಪಂಡಿತನು ಈ ಸತ್ಯವನ್ನು ಮರೆತಂತಿದ್ದನು. ಅವನು ಎಲ್ಲರ ಮುಂದೆ "ತನಗೆ ಎಲ್ಲವೂ ಗೊತ್ತು ತನಗೆ ತಿಳಿಯದ ವಿಚಾರವೇ ಇಲ್ಲ ಎಂದು ಜಂಬದಿಂದ ಹೇಳಿಕೊಳ್ಳುತ್ತಿದ್ದನು.

ಒಂದು ದಿನ ಪಂಡಿತನು ಪಕ್ಕದ ಊರಿಗೆಂದು ಹೊರಟನು. ಅವನು ಪಕ್ಕದ ಊರಿಗೆ ಹೋಗಬೇಕಾದರೆ ಒಂದು ನದಿಯನ್ನು ದಾಟಿಕೊಂಡು ಹೋಗಬೇಕಿತ್ತು. ಆನಂತರ ಪಂಡಿತನು ಅಂಬಿಗನನ್ನು ಕರೆದು ನಾನು ನದಿಯನ್ನು ದಾಟಿಕೊಂಡು ಹೋಗಬೇಕು. ನನಗೆ ನದಿಯನ್ನು ದಾಟಲು ಸಹಾಯ ಮಾಡುವೆಯ ಎಂದು ಕೇಳುತ್ತಾನೆ. ಅಂಬಿಗ ಒಪ್ಪಿಕೊಳ್ಳುತ್ತಾನೆ.

ದೋಣಿಯು ನದಿಯಲ್ಲಿ ಹೊರಟ ಮೇಲೆ ಪಂಡಿತನು ನಾನು ಸಕಲ ಶಾಸ್ತ್ರಗಳನ್ನೆಲ್ಲಾ ತಿಳಿದಿದ್ದೇನೆ, ನಿನಗೇನಾದರು ಶಾಸ್ತ್ರ- ಪುರಾಣಗಳ ಬಗ್ಗೆ ತಳಿದಿದೆಯೋ ಹೇಗೆ ಎಂದು ಅಂಬಿಗನನ್ನು ಪ್ರಶ್ನಿಸುತ್ತಾನೆ. ಅದಕ್ಕೆ ಅಂಬಿಗನು ಶಾಸ್ತ್ರ-ಪುರಾಣಗಳು ನನಗೆ ಗೊತ್ತಿಲ್ಲ, ನಾನು ಕಲಿತವನು ಅಲ್ಲ, ಅವೆಲ್ಲಾ ನಿಮ್ಮಂತವರಿಗೆ ಇರಲಿ ಎಂದು ಹೇಳುತ್ತಾನೆ.

**ಪ್ರಶ್ನೆಗಳು;** **5**

೧. ಬ್ರಾಹ್ಮಣನು ಏನನ್ನು ಓದಿ ಪಂಡಿತನಾಗಿದ್ದನು ?
೨. ಪಂಡಿತನು ಅಂಬಿಗನನ್ನು ಏನೆಂದು ಪ್ರಶ್ನಿಸುತ್ತಾನೆ ?
೩. ಪಂಡಿತನ ಮಾತಿಗೆ ಅಂಬಿಗನು ಏನೆಂದು ಉತ್ತರಿಸಿದನು ?
೪. ಪಂಡಿತನು ಪಕ್ಕದ ಊರಿಗೆ ಹೇಗೆ ಹೋಗಬೇಕಿತ್ತು ?
೫. ಪಂಡಿತನು ಜಂಬದಿಂದ ಏನೆಂದು ಹೇಳಿಕೊಳ್ಳುತ್ತಿದ್ದನು ?

ವಿಭಾಗ ಬಿ

## XI. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ. **13**

೧.ಆದಿ ಮಾನವರು ಮಾಂಸವನ್ನು ಏಕೆ ಬೇಯಿಸಿ ತಿನ್ನುತ್ತಿರಲಿಲ್ಲ?
೨.ಕೋತಿಯು ಯಾವಾಗ ಆತಂಕಗೊಂಡಿತು?
೩.ಆನೆ ಮಾಸ್ತರರು ಏನೆಂದು ಘೋಷಣೆ ಕೂಗಿದರು?
೪.ಅಶ್ವದಳ ಯಾವ ಇಲಾಖೆಯಲ್ಲಿದೆ?
೫.ಪ್ರಾಚೀನ ಒಲಂಪಿಯಾ ನಗರ ಯಾವುದಕ್ಕೆ ಪ್ರಸಿದ್ದಿ ಪಡೆದಿತ್ತು?
೬.ರಾಜನಿಗೆ ಯಾರ ಮೇಲೆ ಪ್ರೀತಿ ಉಂಟಾಯಿತು?
೭.ನವ ಯುಗಾದಿ ಏನು ತಂದಿತು?
೮. ನಾಲ್ಕು ದಿನಗಳ ನಂತರ ರಾಜನ ಅರಮನೆಗೆ ಯಾರು ಬಂದರು ?

೯.1984ರ ಒಲಂಪಿಕ್ ಕ್ರೀಡೆಗಳು ಎಲ್ಲಿ ನಡೆದವು?
೧೦. ಬೇಟೆಗಾರನು ಗಿಣಿಯ ಪಂಜರಗಳನ್ನು ಎಲ್ಲಿಗೆ ತೆಗೆದುಕೊಂಡು ಹೊರಟಿದ್ದನು ?
೧೧.ನವ ಯುಗಾದಿ ಏನು ತೊಳೆಯಿತು?
೧೨. ಒಲಂಪಿಕ್ ಕ್ರೀಡೆಗಳು ಎಷ್ಟು ದಿನಗಳ ಕಾಲ ನಡೆಯುತ್ತವೆ ?
೧೩.ಅಶ್ವದಳವನ್ನು ಇಂಗ್ಲೀಷಿನಲ್ಲಿ ಏನೆಂದು ಕರೆಯುತ್ತಾರೆ?

**XII. ಈ ಮಾತನ್ನು ಯಾರು ಯಾರಿಗೆ ಹೇಳಿದರು ?** **3**

೧."ಹಾಗಾದರೆ ಇವುಗಳನ್ನು ನಾನೇ ಕೊಳ್ಳುತ್ತೇನೆ'
೨.'ನಾನು ಈ ಗಿಣಿಗಳ ಗುಣಕ್ಕೆ ತಕ್ಕಂತೆ ಬೆಲೆ ನಿಗದಿ ಮಾಡಿದ್ದೇನೆ'.

**XIII. 2/3 ವಾಕ್ಯದಲ್ಲಿ ಉತ್ತರಿಸಿರಿ.** **16**

೧.ಅಕ್ಬರನ ಪ್ರಶ್ನೆಗೆ ಬೀರಬಲ್ಲನು ಏನೆಂದು ಉತ್ತರಿಸಿದನು?
೨.ಅಶ್ವದಳದ ಪ್ರಧಾನ ಕಾರ್ಯಾಲಯವು ಎಲ್ಲಿದೆ?ಯಾರ ನಿಯಂತ್ರಣದಲ್ಲಿದೆ?
೩.ಒಲಂಪಿಕ್ ಕ್ರೀಡಾ ಸ್ಪರ್ಧೆಗಳನ್ನು ಎಲ್ಲಿ ಏರ್ಪಡಿಸುತ್ತಾರೆ?
೪.ರಾಜನು ಗಿಣಿಗಳನ್ನು ತೆಗೆದುಕೊಂಡ ನಂತರ ಬೇಟೆಗಾರನಿಗೆ ಏನು ಹೇಳಿದನು?
೫. ಒಲಂಪಿಕ್ ಜ್ಯೋತಿ ಬೆಳಗುವುದನ್ನು ಯಾವಾಗಿನಿಂದ ಮತ್ತು ಎಲ್ಲಿಂದ ಪ್ರಾರಂಭಿಸಲಾಯಿತು ?
೬.ಗ್ರೀಸ್ ದೇಶದ ಜನರಿಗೆ ಒಲಂಪಿಕ್ ಕ್ರೀಡೋತ್ಸವಗಳೂ ಮತ್ತೆ ಯಾವಾಗ ನೆನಪಿಗೆ ಬಂದವು?
೭.ಐದು ರೂಪಾಯಿ ಬೆಲೆಯ ಗಿಣಿಯು ರಾಜನಿಗೆ ಏನೆಂದು ಶಾಪ ಹಾಕಿತು?
೮. ಅಶ್ವದಳದವರು ಯಾರ ಬೆಂಗಾವಲಿಗಿರುತ್ತಾರೆ ?

**XIV. ನಿಮ್ಮ ಶಾಲೆಯಲ್ಲಿ ನಡೆದ ಕ್ರೀಡೋತ್ಸವದ ಕುರಿತು ನಿಮ್ಮ ಗೆಳೆಯ/ಗೆಳತಿಗೆ ಒಂದು ಪತ್ರವನ್ನು ಬರೆಯಿರಿ** **4**

**XV.ಪ್ರಬಂಧ**

೧. ಕಂಪ್ಯೂಟರನ ಉಪಯೋಗ ಮತ್ತು ದುರುಪಯೋಗ 4

**********************